## 2

# ಪ್ರತಿಯೊಬ್ಬನೂ ವಿಶಿಷ್ಟವಾದ ವ್ಯಕ್ತಿಯಾಗಿದ್ದಾನೆ

## (ಯೋಹಾನ 4:1-42)

ಮಕ್ಕಳೊಂದಿಗೆ ಸೇವೆಮಾಡಿದ ಸೈಕೊಥೆರಾಪಿಸ್ಟನಿಗೆ ಏಳು ವರ್ಷದ ಒಬ್ಬ ಬಾಲಕ ಈ ರೀತಿಯಲ್ಲಿ ಬರೆದನು:

> ಪ್ರೀತಿಯ ಡಾಕ್ಟರ್ ಗಾರ್ಡನರ್
>
> ನನ್ನನ್ನು ಪೀಡಿಸುತ್ತಿರುವುದು ಬಹಳ ಹಿಂದಿನ ದಿನಗಳಲ್ಲಿಯ ಒಬ್ಬ ದೊಡ್ಡ ಮನುಷ್ಯ. ಅವನು 13 ವರ್ಷಗಳ ವಯಸ್ಸಿನ ಬಾಲಕ. ಅವನು ನನ್ನನ್ನು ಆಮೆ ಎಂದು ಕರೆದ. ನನಗಾದ ಪ್ಲಾಸ್ಟಿಕ್ ಸರ್ಜರಿಯ ಕಾರಣದಿಂದ ಅವನು ಹಾಗೆ ಅಂದನೆಂದು ನನಗೆ ತಿಳಿದಿದೆ.
>
> ನನ್ನ ತುಟಿಯ ಕಾರಣದಿಂದ ದೇವರು ನನ್ನನ್ನು ದ್ವೇಷಿಸುತ್ತಾನೆಂದು ನಾನು ಯೋಚಿಸುತ್ತಿರುವೆ. ನಾನು ಸಾಯುವಾಗ ಬಹುಶಃ ಆತನು ನನ್ನನ್ನು ನರಕಕ್ಕೆ ಕಳುಹಿಸುವನು.
>
> ಪ್ರೀತಿಯೊಂದಿಗೆ, ಕ್ರಿಸ್[1]

ಇಂದು ಅನೇಕರು ಬಲಹೀನ ಸ್ವಪ್ರತಿಷ್ಠೆಯೊಂದಿಗೆ ಕಷ್ಟಪಡುತ್ತಿದ್ದಾರೆ. ಅದನ್ನು ನಾವು "ಕೀಳು ಮಟ್ಟದ ಮನೋಭಾವನೆ" ಎಂದು ಕರೆಯುತ್ತಿದ್ದೆವು. ಈ ಪರಿಸ್ಥಿತಿಯನ್ನು ಏನೆಂದು ಕರೆದರೂ ಅದು ಇದ್ದವರು ತಮಗೆ ಹೆಚ್ಚಿನ ಬೆಲೆಯಿಲ್ಲ ಎಂದು ಯೋಚಿಸುತ್ತಾರೆ.

"ಪ್ರತಿಯೊಬ್ಬನೂ ವಿಶಿಷ್ಟವಾದ ವ್ಯಕ್ತಿಯಾಗಿದ್ದಾನೆ" ಎಂಬುದನ್ನು ನಾವು ಒತ್ತಿ ಹೇಳಬೇಕಾಗುತ್ತದೆ. ನಮ್ಮ ಅಧ್ಯಯನ ಭಾಗವು ಯೋಹಾನ 4. ಹೊಸ ಒಡಂಬಡಿಕೆಯಲ್ಲಿಯ ಬೇರೆ ಯಾವುದೇ ಅಧ್ಯಾಯಕ್ಕಿಂತ ಯೋಹಾನ 4ನೆಯ ಅಧ್ಯಾಯವು ಯೇಸುವಿನ ಗುಣಲಕ್ಷಣದ ಬಗ್ಗೆ ಹೆಚ್ಚಾದದ್ದನ್ನು ತಿಳಿಸುತ್ತದೆ ಎಂದು ಹೇಳುತ್ತಾರೆ.

### ವಿಚಿತ್ರವಾದ ತೀರ್ಮಾನ (ಯೋಹಾನ 4:1-4)

ಯೋಹಾನ 3 ನಮ್ಮ ಪಾಠಕ್ಕೆ ಹಿನ್ನಲೆಯನ್ನು ಕೊಡುತ್ತದೆ: ಯೇಸು ಪಸ್ಕ ಹಬ್ಬಕ್ಕೆ ಹೋಗಿದ್ದನು. ಹಬ್ಬದ ಒಂದು ಸಾಯಂಕಾಲದಲ್ಲಿ ನಿಕೊದೇಮನೆಂಬ ಪ್ರಸಿದ್ಧನಾದ ಯೆಹೂದಿ ನಾಯಕನೊಂದಿಗೆ ಆತನು ಮಾತನಾಡಿದನು. ಆ ಸಂಭಾಷಣೆಯೊಳಗಿಂದ ಯೋಹಾನ 3:16ರ ಸುಂದರವಾದ ಮಾತುಗಳು ಬಂದವು. ಹಬ್ಬದ ನಂತರ ಯೇಸು ಸ್ವಲ್ಪ ಸಮಯ ಯೂದಾಯದಲ್ಲಿದ್ದನು. ಬಹಳ ಯಶಸ್ಸನ್ನು ಪಡೆದನು. ಆತನ ಯಶಸ್ಸು ಸ್ನಾನಿಕನಾದ ಯೋಹಾನನ ಶಿಷ್ಯರೊಂದಿಗೆ ಕೆಲವೊಂದು ಸಂಘರ್ಷಣೆಯನ್ನು

ತಂದಿತು. ಯೇಸುವಿನ ಮಹಾ ದೊಡ್ಡ ಚಿಂತನೆಯು 4:1ರಲ್ಲಿ ನಮೂದಿಸಿದ ಸಂಗತಿಯಾಗಿದೆ: "ಯೇಸು ಯೋಹಾನನಿಗಿಂತ ಹೆಚ್ಚು ಶಿಷ್ಯರನ್ನು ಮಾಡಿಕೊಂಡು ಅವರಿಗೆ ಬಾಪ್ತಿಸ್ಮ ಮಾಡಿಸುತ್ತಾನೆಂಬ ಸುದ್ದಿಯನ್ನು ಫರಿಸಾಯರು ಕೇಳಿದರು" ಸಮಯಕ್ಕಿಂತ ಮುಂಚಿತವಾಗಿ ತನ್ನ ಮರಣವನ್ನು ತರಬಹುದಾಗಿದ್ದ, ಫರಿಸಾಯ ರೊಂದಿಗಿನ ನೇರವಾದ ಎದುರಿಸುವಿಕೆಯನ್ನು ತಪ್ಪಿಸಲು ಯೇಸು ಬಯಸಿದನು. ಆದುದರಿಂದ ಯೇಸು ಯೂದಾಯವನ್ನು ಬಿಟ್ಟು ಉತ್ತರದಲ್ಲಿ ಗಲಿಲಾಯಕ್ಕೆ ಹೋಗಲು ತೀರ್ಮಾನಿಸಿದನು.

"ಆತನು ಸಮಾರ್ಯ ಸೀಮೆಯನ್ನು ಹಾದು ಹೋಗ ಬೇಕಾಯಿತು" (ವ. 4) ಎಂಬ ವಿಚಿತ್ರ ವಚನಕ್ಕೆ ಇದು ನಮ್ಮನ್ನು ತರುತ್ತದೆ. ಪಾಲೆಸ್ತೀನವು ಮೇಲಿನಿಂದ ಕೆಳಕ್ಕೆ ಸುಮಾರು ನೂರಿಪ್ಪತ್ತು ಮೈಲು ಇತ್ತು, ಆ 120 ಮೈಲುಗಳೊಳಗೆ ಮೂರು ನಿಶ್ಚಿತವಾದ ರಾಜ್ಯ ವಿಭಾಗ ಗಳಿದ್ದವು. ಉತ್ತರದಲ್ಲಿ ಗಲಿಲಾಯ, ದಕ್ಷಿಣದಲ್ಲಿ ಯೂದಾಯ ಮತ್ತು ಮಧ್ಯದಲ್ಲಿ ಸಮಾರ್ಯ ಇದ್ದವು. ಸಮಾರ್ಯದ ಮಧ್ಯದಲ್ಲಿ ಹೋಗುವದನ್ನು ತಪ್ಪಿಸಿಕೊಳ್ಳಲು ಸಾಮಾನ್ಯವಾಗಿ ಯೆಹೂದ್ಯರು ಎಷ್ಟೋ ದೂರ ಹೋಗುತ್ತಿದ್ದರು. ಅವರು ಪೂರ್ವಕ್ಕೆ ಯೋರ್ದನ್ ನದಿಗೆ ಹೋಗಿ, ಅಲ್ಲಿ ನದಿಯನ್ನು ದಾಟಿ, ಆಮೇಲೆ ಉತ್ತರಕ್ಕೆ ಪೆರೆಯ ಮಾರ್ಗವಾಗಿ ಪ್ರಯಾಣ ಮಾಡಿ ಗಲಿಲಾಯ ಸಮುದ್ರದ ಬಳಿಗೆ ಬರುತ್ತಿದ್ದರು. ಆ ಮೇಲೆ ಅವರು ಯೋರ್ದನ್ ನದಿ ದಾಟಿ ಗಲಿಲಾಯ ದೊಳಗೆ ಹೋಗುತ್ತಿದ್ದರು. ಉತ್ತರಕ್ಕೆ ನೇರವಾಗಿ ಹೋದರೆ ಮೂರು ದಿನಗಳ ಪ್ರಯಾಣ. ಆದರೆ ಸುತ್ತು ಮಾರ್ಗವಾಗಿ ಹೋದರೆ ಒಂಭತ್ತು ದಿನಗಳು ಬೇಕಾಗುತ್ತಿತ್ತು. ಇದು ಸುಮಾರು ನ್ಯೂಯಾರ್ಕ್‌ನಿಂದ ಲಾಸ್ ಏಂಜಲ್ಸ್‌ಗೆ ಮೆಕ್ಸಿಕೋ ಮಾರ್ಗವಾಗಿ ಹೋಗುವಷ್ಟಿತ್ತು.[2]

ಯೇಸು ಸಮಾರ್ಯವನ್ನು ಯಾಕೆ ಹಾದು ಹೋಗಬೇಕಾಗಿತ್ತು? ಯೋಹಾನನು ಬಂಧಿಸಲ್ಪಟ್ಟಿದ್ದರಿಂದ[3] ಯೇಸು ಅವಸರದಲ್ಲಿದ್ದನು, ಹಾಗೂ ಯೋಹಾನನ ಶಿಷ್ಯರು ಚದರಿ ಹೋಗುವದನ್ನು ತಪ್ಪಿಸಲು ಬಯಸಿದ್ದನು ಎಂದು ಸೂಚಿಸಲ್ಪಟ್ಟಿದೆ. ಯೇಸು ಎರಡು ದಿನ ಸುಖರದಲ್ಲಿ ಉಳಿದು ಕೊಂಡದ್ದು ಇದಕ್ಕೆ ಅಡ್ಡಿಯಾಯಿತೆಂದು ಕಾಣುತ್ತದೆ. ಆತನು ಹಾಗೆ "ಮಾಡಲೇ ಬೇಕಾಗಿತ್ತು." ಯಾಕಂದರೆ ಒಬ್ಬ ವಿಶೇಷ ಸ್ತ್ರೀ ಅಲ್ಲಿದ್ದಳು. ಆ ಪಟ್ಟಣದಲ್ಲಿ ಅಮೂಲ್ಯವಾದ ಪ್ರಾಣಗಳು ತುಂಬಿಕೊಂಡಿದ್ದವು. ಆತ್ಮಿಕ ಸುಗ್ಗಿಗಾಗಿ ಪಕ್ವ ವಾಗಿದ್ದ ಜನರಿದ್ದರು. ಪ್ರತಿಯೊಬ್ಬರೂ ದೇವರ ದೃಷ್ಟಿಯಲ್ಲಿ ವಿಶೇಷ ವ್ಯಕ್ತಿಯಾಗಿದ್ದರಿಂದ ಆತನು "ಹಾಗೆ ಮಾಡಬೇಕಾಗಿತ್ತು."

## ಒಬ್ಬ ಪಾಪಿಯಾದ ಸ್ತ್ರೀ (ಯೋಹಾನ 4:5-8)

"ಸಮಾರ್ಯ ಸೀಮೆಗೆ ಸೇರಿದ ಸುಖರೆಂಬ ಊರಿಗೆ ಬಂದನು. ಅದು ಯಾಕೋಬನು ತನ್ನ ಮಗನಾದ ಯೋಸೇಫನಿಗೆ ಕೊಟ್ಟ ಭೂಮಿಯ ಹತ್ತಿರದಲ್ಲಿತ್ತು" (ವ. 5). ಸುಖರ ಎಂಬುದು ಪ್ರಾಂತ್ಯದ ಮಧ್ಯದಲ್ಲಿತ್ತು. "ಅಲ್ಲಿ ಯಾಕೋಬನು ತೆಗಿಸಿದ ಬಾವಿಯಿತ್ತು" (ವ. 6ಎ). ಸತ್ಯವೇದದ ನಾಡುಗಳಲ್ಲಿಯ "ಇದೇ ಸ್ಥಳ" ಎಂದು ನಿಶ್ಚಿತ ವಾಗಿ ಹೇಳುವ ಕೆಲವೇ ಸ್ಥಳಗಳಲ್ಲಿ ಇದು ಒಂದಾಗಿದೆ. ಈ ಬಾವಿ ಇನ್ನೂ ಅಲ್ಲಿದೆ - ಇದು ಸುಖರ ಎಂಬ ಪುರಾತನ ಪಟ್ಟಣವಿದ್ದ ಸ್ಥಳದಿಂದ ಸುಮಾರು ಅರ್ಧ ಮೈಲು ದೂರದಲ್ಲಿದೆ.

"ಯೇಸು ದಾರಿ ನಡೆದು ದಣಿದು ಬಾವಿಯ ಬಳಿಯಲ್ಲಿ ಹಾಗೆ ಕೂತುಕೊಂಡನು" (ವ. 6ಬಿ). ತನ್ನ ಸುವಾರ್ತೆಯ ವಿಷಯವನ್ನು ಬರೆದ ಯೋಹಾನನು ಯೇಸು ದೇವರ

ಕುಮಾರನು ಎಂದು ದೃಢಪಡಿಸಬೇಕಾಗಿತ್ತು (ಯೋಹಾನ 20:30, 31). ಅದಕ್ಕಾಗಿ ಬೇರೆ ಇತರ ಸುವಾರ್ತೆಕರಿಗಿಂತ ಯೇಸುವಿನ ಮಾನವತ್ವದ ಬಗ್ಗೆ ಹೆಚ್ಚು ಹೇಳಬೇಕಾಗಿತ್ತು. "ನನಗೆ ನೀರಡಿಕೆಯಾಗಿದೆ" (ಯೋಹಾನ 19:28) ಎಂದು ಯೇಸು ಶಿಲುಬೆಯ ಮೇಲೆ ಹೇಳಿದ್ದನ್ನು ದಾಖಲೆ ಮಾಡಿದವನು ಯೋಹಾನನು. ಯೇಸುವಿಗೆ ನಮ್ಮ ಹಾಗೆ ಆಯಾಸ, ಬಾಯಾರಿಕೆ, ಹಸಿವು ಆಗಿತ್ತು.

ಯೆಹೂದಿ ಲೆಕ್ಕಾಚಾರದ ಪ್ರಕಾರವಾಗಿ[4] ಅದು ಆರನೆಯ ತಾಸಾಗಿತ್ತು. "ಹೆಚ್ಚು ಕಡಿಮೆ ಮಧ್ಯಾಹ್ನವಾಗಿತ್ತು" (ವ. 6ಸಿ). "ಆತನ ಶಿಷ್ಯರು ಊಟಕ್ಕೆ ಬೇಕಾದದ್ದನ್ನು ಕೊಂಡು ಕೊಳ್ಳುವದಕ್ಕಾಗಿ ಊರೊಳಗೆ ಹೋಗಿದ್ದರು" ಎಂದು ವ. 8 ಹೇಳುತ್ತದೆ. ಕಿರಾಣಿ ಅಂಗಡಿ ಇಲ್ಲವೇ ಬೇಗನೆ ಆಹಾರ ತಯಾರಿಸುವ ಸ್ಥಳದಂತೆ ಮೊದಲನೆಯ ಶತಮಾನದಲ್ಲಿದ್ದ ಸ್ಥಳಕ್ಕೆ ಅಹಾರ ಕೊಂಡುಕೊಳ್ಳಲು ಯೇಸು ಅವರನ್ನು ಕಳುಹಿಸಿದ್ದನು.[5]

"ಸಮಾರ್ಯದವಳಾದ ಒಬ್ಬ ಹೆಂಗಸು ನೀರು ಸೇದುವದಕ್ಕೆ ಬಂದಳು" (ವ. 7ಎ). ಈ ಕೆಲವೇ ಶಬ್ದಗಳು ಈ ಸ್ತ್ರೀಯ ಬಗ್ಗೆ ಗ್ರಂಥಗಳಷ್ಟನ್ನು ಮಾತಾಡುತ್ತದೆ: ಸಾಮಾನ್ಯವಾಗಿ ಸ್ತ್ರೀಯರು ಮಧ್ಯಾಹ್ನದ ವೇಳೆಯಲ್ಲಿ ನೀರು ತರಲಿಕ್ಕೆ ಬರುತ್ತಿರಲಿಲ್ಲ. ದಿನದ ತಂಪಾದ ಸಮಯದಲ್ಲಿ ಪ್ರಾತಃಕಾಲ ಹಾಗೂ ಸಾಯಂಕಾಲ ನೀರು ತೆಗೆದು ಕೊಳ್ಳಲು ಬರುತ್ತಿದ್ದರು. ನೀರಿಗಾಗಿ ಹೋಗುವುದು ಸಮಾಜಿಕ ಸಂಗತಿ, ಸಮಾಜದ ಆಚರಣೆಯಾಗಿತ್ತು. ಸ್ತ್ರೀಯರು ಒಬ್ಬರನ್ನೊಬ್ಬರು ಸಂದರ್ಶಿಸಿ ಸುದ್ದಿ ಸಂಗ್ರಹ ಮಾಡುತ್ತಿದ್ದರು. ಆದರೆ ಈ ಸ್ತ್ರೀ ಮಧ್ಯಾಹ್ನದ ಬಿಸಿಲಿನಲ್ಲಿ ಬಂದಳು. ಭೂಗರ್ಭ ಶೋಧಕರು ಸುಖರದ ಬಳಿಯಲ್ಲಿ ನೀರಿನ ಬುಗ್ಗೆಗಳನ್ನು ಕಂಡು ಹಿಡಿದಿರುವರು. ಈ ಸ್ತ್ರೀ ನೀರು ತರಲು ಅರ್ಧ ಮೈಲು ನಡೆಯಬೇಕಾಗಿತ್ತು. ಪಟ್ಟಣದ ಮಹಿಳೆಯರನ್ನು ಸಂಬಂಧಿಸಿ ಈ ಸ್ತ್ರೀಯು ಸಾಮಾಜಿಕ ಬಹಿಷ್ಕೃತಳೆಂದು ಇದೆಲ್ಲವೂ ಸೂಚಿಸುತ್ತದೆ. ವಕ್ರಕಣ್ಣುಗಳನ್ನೂ ಗುಸುಗುಟ್ಟುವಿಕೆಯನ್ನೂ ತಪ್ಪಿಸಿಕೊಳ್ಳಲು ಆಕೆ ಹೀಗೆ ಮಾಡಿದಳು.

## ಆಶ್ಚರ್ಯಕರವಾದ ವಿನಂತಿ
## (ಯೋಹಾನ 4:7, 9)

"ಯೇಸು ಆಕೆಯನ್ನು - ಅಮ್ಮಾ, ನೀರು ಕುಡಿಯುವದಕ್ಕೆ ಕೊಡು ಎಂದು ಕೇಳಿದನು." ... ಸಮಾರ್ಯದವಳು ಆತನಿಗೆ, "ಯೆಹೂದ್ಯನಾದ ನೀನು ಸಮಾರ್ಯದವಳಾದ ನನ್ನನ್ನು ನೀರು ಬೇಡುವುದು ಹೇಗೆ?" ಎಂದು ಹೇಳಿದಳು (7ಬಿ, 9ಎ ವಚನಗಳು).

ಈ ಹೊಕ್ಕು ಬಳಕೆಯ ವಿಷಯದಲ್ಲಿ ಅರ್ಥ ಮಾಡಿಕೊಳ್ಳಲು ಯೆಹೂದ್ಯರಿಗೂ ಸಮಾರ್ಯ ದವರಿಗೂ ಮಧ್ಯದಲ್ಲಿಯ ಸಂಬಂಧದ ಬಗ್ಗೆ ಕೆಲವೊಂದನ್ನು ನಾವು ತಿಳಿಯುವ ಅಗತ್ಯತೆಯಿದೆ. ಜಾನಾಂಗಿಕ ಭಿನ್ನತೆಗಳನ್ನು ನಾವೆಲ್ಲಾ ಬಲ್ಲೆವು - ಯಾವುದೇ ಜಾನಾಂಗಿಕ ಪೂರ್ವಭಾವಿ ವಿರೋಧವು ದೇವರ ಹೃದಯವನ್ನು ಮುರಿಯುವುದು. ಆದರೆ ನಮ್ಮಲ್ಲಿ ಹೆಚ್ಚಾದವರು ಯೆಹೂದಿ ಹಾಗೂ ಸಮಾರ್ಯರ ಮಧ್ಯದಲ್ಲಿಯ ದ್ವೇಷ ದೊಂದಿಗೆ ಹೋಲಿಕೆಯನ್ನು ನಾವೆಂದೂ ನೋಡಿರುವದಿಲ್ಲ.[6] ಈ ದ್ವೇಷವು ಅನೇಕ ವರ್ಷಗಳ ಹಿಂದಿನದು. ಕ್ರಿ. ಪೂ. 727ರಲ್ಲಿ ಉತ್ತರದ ಹತ್ತು ಗೋತ್ರಗಳಲ್ಲಿ ಹೆಚ್ಚಾದವರು ಅಶ್ಶೂರರಿಂದ ಸೆರೆಯಾಗಿ ಒಯ್ಯಲ್ಪಟ್ಟಿದ್ದರ ಪರಿಣಾಮವಾಗಿ ಸಮಾರ್ಯದವರು ಮಿಶ್ರಕುಲದವರಾಗಿದ್ದರು.[7] ಉತ್ತರದಲ್ಲಿ ಬಿಡಲ್ಪಟ್ಟ ಯೆಹೂದ್ಯರು ಉತ್ತರ ಪಾಲೇಸ್ತೀನ

ದಲ್ಲಿಯ ಅನ್ಯಜನಾಂಗದವರೊಂದಿಗೆ ಮಿಶ್ರವಿವಾಹ ಮಾಡಿಕೊಂಡರು.[8] ಈ ವಿವಾಹ ಗಳಿಂದ ಹುಟ್ಟಿದವರು ಸಮಾರ್ಯದವರಾದರು. ಯೆಹೂದ್ಯರಿಗೆ ಜಾನಾಂಗಿಕ ಶುದ್ಧತೆಯ ನಾಶನವು "ಕ್ಷಮಿಸಲ್ಪಡಲಾರದ ಪಾಪಕ್ಕೆ" ಸಮಾನವಾಗಿತ್ತು. ಇಂದೂ ಸಹ, ಬಹಳ ಕಟ್ಟುನಿಟ್ಟಾದ ಯೆಹೂದಿ ಕುಟುಂಬದ ಮಕ್ಕಳಲ್ಲಿ ಒಬ್ಬರು ಯೆಹೂದಿ ವಿಶ್ವಾಸದಿಂದ ಹೊರಗೆ ಮದುವೆಯಾದರೆ, ಕುಟುಂಬವು ಆ ಮಗುವಿನ ಶವಸಂಸ್ಕಾರಮಾಡಿದಂತೆ ಮಾಡುವರು: ಅವರಿಗೆ ಸಂಬಂಧಿಸಿದಂತೆ ಆ ಮಗು ಸತ್ತು ಹೋಗಿದೆ.

ಯೇಸು ಈ ಸ್ತ್ರೀಯೊಂದಿಗೆ ಮಾತಾಡಿದ್ದರಲ್ಲಿ ಮೂರು ಆಶ್ಚರ್ಯಕರವಾದ ಸಂಗತಿಗಳು ಇರುವವು. (1) ನಾವು ಆಗಲೇ ಗಮನಿಸಿದಂತೆ ಯೇಸು ಕುಡಿಯಲು ನೀರು ಕೇಳಿದ್ದು ಸಮಾರ್ಯದ ವ್ಯಕ್ತಿಗೆ. (2) ಆ ವ್ಯಕ್ತಿ ಒಬ್ಬ ಸ್ತ್ರೀಯಾಗಿದ್ದಳು. ಯೆಹೂದಿ ಪುರುಷರಿಗೆ ಬಹಿರಂಗದಲ್ಲಿ ಸ್ತ್ರೀಯರೊಂದಿಗೆ ಸಂಬಂಧವಿರಲಿಲ್ಲ (ವ. 27 ಗಮನಿಸಿರಿ). ಯೆಹೂದಿ ರಬ್ಬಿಯು ತನ್ನ ಸ್ವಂತ ಹೆಂಡತಿ ಇಲ್ಲವೇ ಮಗಳೊಂದಿಗೆ ಬಹಿರಂಗದಲ್ಲಿ ಮಾತಾಡುತ್ತಿರಲ್ಲಿಲ. ಫರಿಸಾಯ ಪಂಥದೊಳಗೆ ಒಂದು ಗುಂಪು "ಘಾಯಗೊಂಡವರು, ರಕ್ತಸುರಿಯುವವರು" ಎಂದು ಕರೆಯಲ್ಪಡುತ್ತಿತ್ತು. ಯಾಕಂದರೆ ಅವರು ಸ್ತ್ರೀಯನ್ನು ನೋಡಿದಾಗ ಗೋಡೆಗಳ, ಗಿಡಗಳ ಹಾಗೂ ಅಂಥವುಗಳ ಕಡೆಗೆ ಓಡಿ ಹೋಗುತ್ತಿದ್ದರು. (3) ನಾವು ನೋಡುವಂತೆ ಈಕೆ ಸ್ತ್ರೀ ಅಷ್ಟೆ ಅಲ್ಲ, ಪ್ರಶ್ನಾರ್ಥಕವಾದ ನೈತಿಕ ಗುಣವುಳ್ಳ ಸ್ತ್ರೀಯೂ ಆಗಿದ್ದಳು.

ಅಧ್ಯಾಯ 3 ಮತ್ತು 4ರಲ್ಲಿ ಯೇಸುವು ಎದುರಿಸಿದ ವ್ಯಕ್ತಿಗಳ ಮಧ್ಯದಲ್ಲಿ ಇರುವ ವಿರುದ್ಧವಾದ ಸಂಗತಿಯು ಬೇಕೆಂತಲೇ ಇರುವುದೆಂದು ತೋರುತ್ತದೆ: ಯೋಹಾನ 3ರಲ್ಲಿ ಯೇಸು ನಿಕೊದೇಮನನ್ನು ಸಂದರ್ಶಿಸಿದನು. ಅವನು (1) ಒಬ್ಬ ಯೆಹೂದ್ಯನು, (2) ಪುರುಷನು ಹಾಗೂ (3) ಉನ್ನತ ನೈತಿಕ ಮಟ್ಟ ಹಾಗೂ ಪ್ರಾಮಾಣಿಕತೆಯುಳ್ಳ ವ್ಯಕ್ತಿಯಾಗಿದ್ದನು. ಯೋಹಾನ 4ರಲ್ಲಿ ಬಾವಿಯ ಬಳಿಯಲ್ಲಿ ಯೇಸು ಒಬ್ಬ ಸ್ತ್ರೀಯನ್ನು ಸಂದರ್ಶಿಸಿದನು. ಆಕೆ (1) ಒಬ್ಬ ಸಮಾರ್ಯದವಳು, (2) ಒಬ್ಬ ಸ್ತ್ರೀಯಾಗಿದ್ದಳು ಹಾಗೂ (3) ಕನಿಷ್ಠ ತರಗತಿಯ ನೈತಿಕ ಗುಣವುಳ್ಳವಳು ಆಗಿದ್ದಳು. ಇಬ್ಬರಿಗೂ ರಕ್ಷಣೆಯ ಅವಶ್ಯಕತೆಯಿತ್ತು. ಯೇಸು ನಿಕೊದೇಮನೊಂದಿಗೆ ನಡೆದು ಕೊಂಡ ರೀತಿ ಯಲ್ಲಿಯೇ ಆ ಸ್ತ್ರೀ ಯೊಂದಿಗೂ ಕೃಪೆ, ಮೃದು ಮನೋಭಾವನೆ ಹಾಗೂ ಗೌರವ ದಿಂದ ನಡೆದು ಕೊಂಡನು. ಯಾಕೆ? ಯಾಕೆಂದರೆ ಪ್ರತಿಯೊಬ್ಬರೂ ವಿಶಿಷ್ಟವಾದ ವ್ಯಕ್ತಿ ಯಾಗಿದ್ದಾರೆ.

ನೀನು ಧರ್ಮವಿರುದ್ಧವನಾಗಿರಬಹುದು ಇಲ್ಲವೇ ಧರ್ಮ ವಿಲ್ಲದವನಾಗಿರಬಹುದು, ಪುರುಷನಾಗಿರಬಹುದು, ಸ್ತ್ರೀಯಾಗಿರಬಹುದು, ಉನ್ನತ ನೈತಿಕತೆಯುಳ್ಳವನಾಗಿರ ಬಹುದು ಇಲ್ಲದೆ ಸಮಸ್ಯೆಗಳಿಂದ ತುಂಬಿದವನಾಗಿರಬಹುದು, ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಿರಬಹುದು ಇಲವೇ "ಯಾವನೂ ಅಲ್ಲದವನಾಗಿರಬಹುದು," ದೇವರು ನಿನ್ನನ್ನು ಪ್ರೀತಿಸುತ್ತಾನೆ. ನೀನು ದೇವರ ಸ್ವರೂಪದಲ್ಲಿ ಉಂಟು ಮಾಡಲ್ಪಟ್ಟಿರುವಿ (ಆದಿ. 1:26). ನೀನು ದೇವರ ವಿಶೇಷ ವ್ಯಕ್ತಿ, ಯೇಸು ನಿನಗಾಗಿ ಶಿಲುಬೆಯ ಮೇಲೆ ಮರಣ ಹೊಂದಿದನು.

ಬಾವಿಯ ಬಳಿಯಲ್ಲಿಯ ಸ್ತ್ರೀಯೊಡನೆ ಯೇಸುವಿನ ಸಂಭಾಷಣೆಯ ವಿವರಣೆಯಲ್ಲಿ ಯೋಹಾನನು ಈ ಮಾತನ್ನು ಸೇರಿಸಿದ್ದಾನೆ. "(ಯೆಹೂದ್ಯರಿಗೂ ಸಮಾರ್ಯರಿಗೂ ಬಳಕೆಯಿರಲಿಲ್ಲ)" (ವ. 9). ಇದರ ಅರ್ಥ ಯೆಹೂದ್ಯರಿಗೆ ಸಮಾರ್ಯರೊಂದಿಗೆ ಯಾವುದೇ ಹೊಕ್ಕು ಬಳಕೆಯಿರಲಿಲ್ಲ ಎಂದರ್ಥವಲ್ಲ. ಅವರೊಂದಿಗೆ ಹಣಕಾಸಿನ ವ್ಯವಹಾರವಿತ್ತು. (ಶಿಷ್ಯರು ಆಗಲೇ ಸಮಾರ್ಯದ ಪಟ್ಟಣದಲ್ಲಿ ಊಟವನ್ನು

ಕೊಂಡುಕೊಳ್ಳಲು ಹೋಗಿದ್ದರು). ಸಾಮಾನ್ಯವಾಗಿ ಅವರೊಂದಿಗೆ ಸಮಾಜಿಕ ವ್ಯವಹಾರವು ಇರಲಿಲ್ಲ ಎಂದು ಯೋಹಾನನು ಒತ್ತಿ ಹೇಳಿದನು. ಇನ್ನೊಂದು (NEB) ಭಾಷಾಂತರದಲ್ಲಿ ಹೀಗಿದೆ: "ಯೆಹೂದ್ಯರೂ ಸಮಾರ್ಯರೂ ಹುದುವಾಗಿ ಪಾತ್ರೆಗಳನ್ನು ಉಪಯೋಗಿಸುವುದಿಲ್ಲ." ಸಮಾರ್ಯರ ಪಾತ್ರೆಗಳಿಂದ ಯೆಹೂದ್ಯರು ಕುಡಿಯುವುದಿಲ್ಲ ಇಲ್ಲವೇ ತಿನ್ನುವದಿಲ್ಲ. ಯಾಕಂದರೆ ಅವು ಹೊಲೆಯಾಗಿವೆ ಎಂದು ತಿಳಿಯುತ್ತಿದ್ದರು. ಯೇಸು ಕುಡಿಯಲು ನೀರನ್ನು ಕೇಳಿದಾಗ ಆಕೆಯ ಪಾತ್ರೆಯಿಂದ ನೀರು ಕುಡಿಯಲು ಆತನು ಸಿದ್ಧನಾಗಿದ್ದನು. ಯೇಸು ಯಾಕೆ ತನ್ನ ಪದ್ಧತಿಗೆ ವಿರುದ್ಧವಾಗಿ ಹೋದನು? ಯಾಕಂದರೆ ಆ ಸ್ತ್ರೀ ಆತನಿಗೆ ವಿಶೇಷವಾಗಿದ್ದಳು. ಯಾಕಂದರೆ ಪ್ರತಿಯೊಬ್ಬರೂ ಕರ್ತನಿಗೆ ವಿಶೇಷ ವ್ಯಕ್ತಿಗಳಾಗಿದ್ದಾರೆ.

## ಆಶ್ಚರ್ಯಕರವಾದ ಹೇಳಿಕೆ
## (ಯೋಹಾನ 4:10-15)

"ಅದಕ್ಕೆ ಯೇಸು - ದೇವರು ಕೊಡುವ ವರವೇನೆಂಬುದೂ [ಯೇಸು ತಾನೇ ಜಗತ್ತಿಗೆ ದೇವರು, ಯೋಹಾನ 3:16] ಕುಡಿಯುವದಕ್ಕೆ ನೀರು ಕೊಡು ಎಂದು ನಿನಗೆ ಹೇಳಿದವನು ಯಾರೆಂಬುದೂ ನಿನಗೆ ತಿಳಿದಿದ್ದರೆ ನೀನು ಅವನನ್ನು ಬೇಡಿ ಕೊಳ್ಳುತ್ತಿದ್ದಿ, ಅವನು ನಿನಗೆ ಜೀವಕರವಾದ ನೀರನ್ನು ಕೊಡುತ್ತಿದ್ದನು ಅಂದನು" (ವ. 10). ಬಾವಿಯಲ್ಲಿ ಸಂಗ್ರಹವಾದ ನೀರಿಗೆ ವಿರುದ್ಧವಾಗಿ ಹರಿಯುವ ಪ್ರವಾಹದ ನೀರು "ಜೀವಕರವಾದ ನೀರು" ಎಂದು ಯೆಹೂದ್ಯರು ತಿಳಿದಿದ್ದರು. ಇದಕ್ಕಿಂತ ಹೆಚ್ಚು ಮಹತ್ವದ್ದಾಗಿ, ಪ್ರವಾದಿಗಳು "ಜೀವಕರವಾದ ನೀರು" ಎಂಬುದನ್ನು ವ್ಯಕ್ತಿಯೊಳಗಿನ ಆತ್ಮಿಕ ದಾಹವನ್ನು ತೃಪ್ತಿಪಡಿಸುವ ದೇವರ ಶಕ್ತಿ ಮತ್ತು ಸಾನ್ನಿಧ್ಯಕ್ಕೆ ಸಂಬಂಧಿಸಿ ಹೇಳಿದ್ದಾರೆ.[9] ಹೀಗೆ ಯೇಸು ಆತ್ಮಿಕ ಜೀವನ ಶಕ್ತಿಗೆ, ಆತ್ಮಿಕ ಸಾಮರ್ಥ್ಯಕ್ಕೆ ಸಂಬಂಧಿಸಿ ಹೇಳಿದ್ದಾನೆ.

ಬಹಳ ಸಲ ಇದ್ದಂತೆಯೇ, ಯೇಸುವಿನ "ವಿದ್ಯಾರ್ಥಿ" ಅರ್ಥ ಮಾಡಿಕೊಳ್ಳಲಿಲ್ಲ.

> ಆ ಹೆಂಗಸು ಆತನಿಗೆ - ಅಯ್ಯಾ, ಸೇದುವದಕ್ಕೆ ನನ್ನಲ್ಲಿ ಏನೂ ಇಲ್ಲ, ಬಾವಿ ಆಳವಾಗಿದೆ; [ಆ ಸಮಯದಲ್ಲಿ ಅದು 100 ರಿಂದ 150 ಅಡಿ ಆಳವಾಗಿತ್ತು[10]]; ಹೀಗಿರುವಾಗ ಆ ಜೀವಕರವಾದ ನೀರು ನಿನಗೆ ಎಲ್ಲಿಂದ ಬಂತು? ನಮ್ಮ ಹಿರಿಯನಾದ ಯಾಕೋಬನಿಗಿಂತ ನೀನು ದೊಡ್ಡವನೋ? ಅವನೇ ಈ ಬಾವಿಯನ್ನು ನಮಗೆ ಕೊಟ್ಟವನು; ಅವನೂ ಅವನ ಮಕ್ಕಳೂ ಅವನು ಸಾಕಿದೆಲ್ಲವು ಸಹಿತವಾಗಿ ಇದೇ ಬಾವಿಯ ನೀರನ್ನು ಕುಡಿದರು ಎಂದಳು (11, 12 ವಚನಗಳು).

ಯೇಸುವಿಗೂ ಆತನ ಶ್ರೋತೃಗಳಿಗೂ ಇದು ಸಾಮಾನ್ಯ ಸಂದರ್ಭವಾಗಿತ್ತು, ರಹಸ್ಯ ಭಾಷೆಯಲ್ಲಿ ಆಶ್ಚರ್ಯಕರವಾದ ಹೇಳಿಕೆಯನ್ನು ಆತನು ಕೊಡುವನು. ತಪ್ಪು ಅರ್ಥ ಮಾಡಿಕೊಂಡು ಆತನ ಶ್ರೋತೃಗಳು ಆತನನ್ನು ಅಕ್ಷರಶಃವಾಗಿ ತೆಗೆದು ಕೊಳ್ಳುವರು. ಆಗ ಯೇಸು ಆತ್ಮಿಕ ಅರ್ಥದಲ್ಲಿ ಅವರನ್ನು ನಡೆಸುವನು.

"ಯೇಸು ಆಕೆಗೆ - ಈ ನೀರನ್ನು ಕುಡಿಯುವವರೆಲ್ಲರಿಗೆ (ಅಂದರೆ ಈ ಬಾವಿಯಲ್ಲಿಯ ನೀರನ್ನು) ತಿರಿಗಿ ನೀರಡಿಕೆಯಾಗುವುದು" (ವ. 13). ಇದು ಈ ಜೀವನದಲ್ಲಿ ಪ್ರತಿಯೊಂದರ ಬಗೆಗೂ ಸತ್ಯವಾಗಿರುವುದು. ನಾವು ಕುಡಿಯುತ್ತೇವೆ: ನಮಗೆ ಪುನಃ

ಬಾಯಾರಿಕೆಯಾಗುತ್ತದೆ. ನಾವು ಊಟ ಮಾಡುತ್ತೇವೆ; ಪುನಃ ಹಸಿವೆಯಾಗುತ್ತದೆ. ನಮಗೆ ಒಳ್ಳೆ ಸಮಯವಿರುತ್ತದೆ. ಆದರೆ ಆನಂದದ ಭಾವನೆ ಅಳಿದು ಹೋಗುತ್ತದೆ. ಹಾಗೂ ನಾವು ಸುಖವನ್ನು ಪುನಃ ಹುಡುಕುವೆವು. ಜಯವಾಗಲಿ, ಪ್ರಸಿದ್ಧಿಯಾಗಲಿ ಇಲ್ಲವೆ ಸುಖವಾಗಲೀ ಪ್ರತಿಯೊಂದೂ ಈ ಜೀವನದಲ್ಲಿ ಬೇಗನೇ ಹೋರಟು ಹೋಗುತ್ತದೆ.

ಯೇಸು ಮುಂದುವರಿಸಿ ಹೇಳಿದನು: "ನಾನು ಕೊಡುವ ನೀರನ್ನು ಕುಡಿದವನಿಗೆ ಎಂದಿಗೂ ನೀರಡಿಕೆಯಾಗುವದಿಲ್ಲ: ನಾನು ಅವನಿಗೆ ಕೊಡುವ ನೀರು ಅವನಲ್ಲಿ ಉಕ್ಕುವ ಒರತೆಯಾಗಿದ್ದು ನಿತ್ಯ ಜೀವವನ್ನು ಉಂಟುಮಾಡುವುದು" (ವ. 14). ಕ್ರೈಸ್ತ ಮಾರ್ಗದಲ್ಲಿ ಕಂಡುಕೊಳ್ಳಬಹುದಾದ ಬಲ, ಆನಂದ ಮತ್ತು ಶಕ್ತಿಯ ಬಗ್ಗೆ ಯೇಸು ಮಾತಾಡುತ್ತಿದ್ದನು. "ಮೆಸ್ಸೀಯನ ಮುಖಾಂತರ ಬರುವವೆಂದು ಪ್ರವಾದಿಗಳು ಹೇಳಿದ ಎಲ್ಲಾ ಸಂಗತಿಗಳನ್ನು ನಾನು ತರುವೆನು. ನಿಮಗೆ ಸಮೃದ್ಧ ಜೀವನವಿರುವುದು" ಎಂದು ಯೇಸು ಹೇಳುತ್ತಿರುವನು.

ಇದು ಆ ಸ್ತ್ರೀಗೆ ಅದ್ಭುತಕರವಾದದ್ದಾಗಿ ಕಂಡಿತು. ಆದರೆ ಯೇಸು ಯಾವುದರ ಬಗ್ಗೆ ಮಾತಾಡುತ್ತಿದ್ದಾನೆ ಎಂಬ ವಿಚಾರ ಆಕೆಯಲ್ಲಿರಲಿಲ್ಲ. "ಆ ಹೆಂಗಸು - ಅಯ್ಯಾ, ನನಗೆ ಆ ನೀರನ್ನು ಕೊಡು; ಕೊಟ್ಟರೆ ಇನ್ನು ಮೇಲೆ ನನಗೆ ನೀರಡಿಕೆಯಾಗಲಿಕ್ಕಿಲ್ಲ; ನೀರು ಸೇದುವದಕ್ಕೆ ಇಷ್ಟು ದೂರ ಬರಬೇಕಾದದ್ದೂ ಇಲ್ಲ" (ವ. 15) ಎಂದು ಹೇಳಿದಳು. "ಅದು ಮಹತ್ವದ್ದು! ನೀರು ತರಲು ಬಿಸಿಲಿನಲ್ಲಿ ಅರ್ಧ ಮೈಲು ಬರುವುದು ತಪ್ಪುತ್ತದೆ! ಪಾತ್ರೆ ಹೊತ್ತು ಕೊಂಡು ಬರುವದರಲ್ಲಿ ನನಗೆ ಬೇಜಾರಾಗಿದೆ" ಎಂಬಂತೆ ಹೇಳಿದಳು.

## ಶಾಂತಚಿತ್ತದ ಪ್ರಶ್ನೆ
## (ಯೋಹಾನ 4:16-18)

ಈಗ ಯೇಸು ಸ್ತ್ರೀಯ ಗಮನವನ್ನು ಸೆಳೆದು ಕೊಂಡಿದ್ದು, ಆಕೆಯ ಹೃದಯದ ಮೇಲೆ ಕಾರ್ಯ ಸಾಧಿಸಲು ಸಿದ್ಧನಾಗಿದ್ದನು. ಯೇಸು ಹೇಡಿ ವೈದ್ಯನಾಗಿರಲಿಲ್ಲ. "ಹೋಗಿ, ನಿನ್ನ ಗಂಡನನ್ನು ಇಲ್ಲಿಗೆ ಕರಕೊಂಡು ಬಾ ಎಂದು ಹೇಳಿದನು" (ವ. 16). ನಾವು ಕ್ರಿಸ್ತನ ಬಳಿಗೆ ಬರುವ ಮೊದಲು, ನಮ್ಮ ಕಡೆಗೆ ನಾವೇ ಬಹಿರಂಗವಾಗಿ, ಪ್ರಾಮಾಣಿಕವಾಗಿ ನೋಡಿ ಕೊಳ್ಳಬೇಕು. ದೇವರ ವಾಕ್ಯದ ಕನ್ನಡಿಯಲ್ಲಿ ನೋಡಿ ಕೊಳ್ಳಬೇಕು ... . ನಾವಿರುವಂತೆ ನಮ್ಮನ್ನು ನೋಡಿಕೊಳ್ಳಬೇಕು. ಆ ಸ್ತ್ರೀ ಇದನ್ನೇ ಮಾಡಬೇಕೆಂದು ಯೇಸು ಹೇಳುತ್ತಿರುವನು.

"ಅದಕ್ಕೆ ಆ ಹೆಂಗಸು, 'ನನಗೆ ಗಂಡನಿಲ್ಲ ಅಂದಳು' " (ವ. 17ಎ). ಸಂವಾದದಲ್ಲಿ ಬಂದ ಆ ಅಂಶಕ್ಕೆ ಪದಗಳಿಗಾಗಿ ಆಕೆ ತಡವರಿಸಲಿಲ್ಲ. ಆಕೆ ನಿರರ್ಗಳವಾಗಿ ಮಾತಾಡುವ ವಾಚಾಳಿಯಾಗಿದ್ದಳು. ಈಗ ಹೇಳಲು ಸ್ವಲ್ಪ ಮಾತುಗಳಿದ್ದವು - ಇಂಗ್ಲೀಷಿನಲ್ಲಿ ಕೇವಲ ನಾಲ್ಕು ಪದಗಳು (ಗ್ರೀಕಿನಲ್ಲಿ ಕೇವಲ ಮೂರು ಪದಗಳು). ಆಕೆಯ ಮನಸ್ಸಿನಲ್ಲಿಯ ನೋವನ್ನು ಗಮನಿಸಬಹುದು.

"ಯೇಸು ಆಕೆಗೆ, 'ನನಗೆ ಗಂಡನಿಲ್ಲವೆಂದು' ನೀನು ಹೇಳಿದ್ದು ಸರಿಯಾದ ಮಾತು"; ನಿನಗೆ ಐದು ಮಂದಿ ಗಂಡಂದಿರಿದ್ದರು. ಈಗ ಇರುವವನು ನಿನಗೆ ಗಂಡನಲ್ಲ. ನೀನು ಹೇಳಿದ್ದು ನಿಜವಾದ ಸಂಗತಿ [ಅಂದರೆ ನೀನು ಸತ್ಯವನ್ನೇ ಹೇಳಿದ್ದೀ]" (17ಬಿ, 18 ವಚನಗಳು).

ಯೇಸುವಿನೊಂದಿಗೆ ಮುಖಾಮುಖಿಯಾಗಿ ಬರುವುದು ಮೊದಲು ಅನಾನುಕೂಲ ತೆಯ ಅನುಭವವಾಗಿರುವುದು. ಈ ಘಟನೆಯ ಸ್ವಲ್ಪ ಸಮಯದನಂತರ, ಯೇಸು

ಗಲಿಲಾಯಕ್ಕೆ ಹೋಗಿ ಕಪೆರ್ನೌಮಿಗೆ ಹಿಂದಿರುಗಿ ಬಂದನು. ಪೇತ್ರನು ಪುನಃ ಮೀನು ಹಿಡಿಯುವದಕ್ಕೆ ಹೋದನು. ಲೂಕ 5ರಲ್ಲಿ ಅದ್ಭುತಕರವಾಗಿ ಮೀನು ಹಿಡಿದ ಕಥೆಯಿರುವುದು. ಪೇತ್ರನು ಯೇಸುವಿನೊಂದಿಗೆ ಆಗಲೇ ಬಹಳವಾಗಿ ಪ್ರಯಾಣ ಮಾಡಿದ್ದನು. ಹೀಗಿದ್ದರೂ ಅವನು ಮೊದಲನೆಯ ಸಲಕ್ಕೆ ಸಂಪೂರ್ಣವಾಗಿ ಯೇಸುವಿನ ಮಹಿಮೆಯನ್ನೂ ಶಕ್ತಿಯನ್ನೂ ನೋಡಿದನು. ಹಾಗೂ ಆ ಮಹಿಮೆಯ ಬೆಳಕಿನಲ್ಲಿ ತನ್ನನ್ನು ನೋಡಿದನು. "ಸ್ವಾಮೀ, ನಾನು ಪಾಪಾತ್ಮನು; ನನ್ನನ್ನು ಬಿಟ್ಟು ಹೋಗಬೇಕು" (ವ. 8) ಎಂದು ಅವನು ಕೂಗಿದನು.

ಸುವಾರ್ತೆಯ ಸಂದೇಶದಲ್ಲಿ ಅಪರಾಧಕ್ಕೆ ಭಾಗವಿಲ್ಲವೆಂದು ಕೆಲವರು ಹೇಳುತ್ತಾರೆ. ಆದರೆ ಅದು ಇದೆ. ನಮ್ಮ ಜೀವನದಲ್ಲೆಲ್ಲಾ ನಾವು ಅಪರಾಧಿ ಮನೋಭಾವನೆಯುಳ್ಳವರಾಗಿರ ಬೇಕೆಂದು ದೇವರು ಬಯಸುವದಿಲ್ಲ. ಆದರೆ ದೇವರ ದಯೆ ಮತ್ತು ಕೃಪೆಯ ನಮ್ಮ ಮೆಚ್ಚಿಕೆಯು ನಮ್ಮ ಆತ್ಮಿಕ ಅಗತ್ಯತೆಗಳ ತಿಳುವಳಿಕೆ ಯೊಂದಿಗೆ ಪ್ರಾರಂಭವಾಗುತ್ತದೆ.

ಈ ಸ್ತ್ರೀ ಯಾರಾಗಿದ್ದಳು ಮತ್ತು ಏನಾಗಿದ್ದಳು ಎಂಬುದನ್ನು ಸಂಪೂರ್ಣವಾಗಿ ಯೇಸು ತಿಳಿದಿದ್ದನೆಂಬುದನ್ನು ಗಮನಿಸಿರಿ. ಆನಂತರದಲ್ಲಿ, ಒಬ್ಬ ಪಾಪಿ ಸ್ತ್ರೀಯು ತನಗೆ ಅಭಿಷೇಕ ಮಾಡಲು ಯೇಸು ಬಿಟ್ಟನು ಮತ್ತು ಆತನ ವೈರಿಗಳು ಆ ಸ್ತ್ರೀ ಎಂಥವಳಾ ಗಿದ್ದಳೆಂಬುದನ್ನು ಆತನು ತಿಳಿದಿರಲಿಲ್ಲವೆಂದು ಯೋಚಿಸಿದರು.[11] ಈ ಸಮಾರ್ಯದ ಸ್ತ್ರೀ ಎಂಥ ವ್ಯಕ್ತಿಯೆಂದು ಆತನು ತಿಳಿದಿದ್ದ ರೀತಿಯಲ್ಲಿ ಆಕೆ ಎಂಥ ವ್ಯಕ್ತಿ ಎಂಬುದನ್ನು ಯೇಸು ತಿಳಿದಿದ್ದನು. ಆಕೆ ಇನ್ನೂ ಆತನಿಗೆ ವಿಶಿಷ್ಟವಾದವಳು. ಯೇಸುವು ನಮ್ಮ ಹೃದಯಗಳಲ್ಲಿಯೂ ಜೀವನಗಳಲ್ಲಿಯೂ ನೋಡುವಾಗ, ಕೆಟ್ಟದ್ದನ್ನೂ ಸಮಸ್ಯೆಯನ್ನೂ ಹೋರಾಟಗಳನ್ನೂ ನೋಡುವದಷ್ಟೇ ಅಲ್ಲ, ಒಳ್ಳೆಯದನ್ನೂ ಸಾಮರ್ಥ್ಯವನ್ನೂ ದೇವರ ಸಹಾಯದಿಂದ ನಾವು ಏನು ಆಗುತ್ತೇವೆ ಎಂಬುದನ್ನೂ ನೋಡುವನು. ಈ ವಿಷಯದಲ್ಲಿ, ಒಬ್ಬ ಮಹಿಳೆಯು ಇಡೀ ಪಟ್ಟಣವನ್ನು ತನ್ನ ವಿಶ್ವಾಸದ ಮಾರ್ಗದ ಮೇಲೆ ನಡಿಸಲು ಪ್ರಯತ್ನಿಸುವದನ್ನು ಕಂಡನು. ಯೇಸುವಿಗೆ ಪ್ರತಿಯೊಬ್ಬನೂ ವಿಶಿಷ್ಟ ವ್ಯಕ್ತಿಯಾಗಿದ್ದಾನೆ.

## ಮಹತ್ವದ ಚರ್ಚೆ
## (ಯೋಹಾನ 4:19-26)

ಯೇಸು ಆ ಸ್ತ್ರೀಯ ಆತ್ಮಿಕ ಅಗತ್ಯತೆಗಳನ್ನು ಬಹಿರಂಗ ಪಡಿಸಿದಾಗ, ಆಕೆ ಹೇಗೆ ಪ್ರತಿಕ್ರಿಯಿಸಿದಳು? ಆಕೆ ವಿಷಯವನ್ನು ಬದಲಾಯಿಸಿದಳು (ವ. 19)![12] (ಯಾರೊಂದಿ ಗಾದರೂ ನೀನು ಯಾವಾಗಲಾದರೂ ಅಧ್ಯಯನ ಮಾಡಿದ್ದೀಯಾ ಹಾಗೂ ಅವನ ಆತ್ಮಿಕ ಅಗತ್ಯತೆಗಳ ಬಗ್ಗೆ ಮಾತನಾಡಿದಾಗ, ಅವನು ವಿಷಯ ಬದಲಾಯಿಸಿದ್ದಾನೋ?)

"ಆ ಹೆಂಗಸು ಆತನಿಗೆ - ಅಯ್ಯಾ, ನೀನು ಪ್ರವಾದಿಯೆಂದು ನನಗೆ ಕಾಣುತ್ತದೆ" ಎಂದಳು (ವ. 19). ಸಮಾರ್ಯದವರು ಕೇವಲ ಹಳೆ ಒಡಂಬಡಿಕೆಯ ಮೊದಲಿನ ಐದು ಪುಸ್ತಕಗಳನ್ನು ಆದಿಕಾಂಡದಿಂದ ಧರ್ಮೋಪದೇಶಕಾಂಡದ ವರೆಗೆ ಮಾತ್ರ ಉಪ ಯೋಗಿಸುತ್ತಿದ್ದರು. ಈ ಪುಸ್ತಕಗಳು ಪ್ರವಾದಿಗಳ ಬಗ್ಗೆ ಏನು ಹೇಳುವದಿಲ್ಲ. ಹೀಗಿದ್ದರೂ ಸಮಾರ್ಯದವರು ತಾವು ಒಪ್ಪಿಕೊಳ್ಳುವದಕ್ಕಿಂತಲೂ ಹೆಚ್ಚಾದದ್ದನ್ನು ಯೆಹೂದ್ಯರಿಂದ ಕಲಿತುಕೊಂಡಿದ್ದರು. ಆ ಸ್ತ್ರೀಯು ಪ್ರವಾದಿಗಳ ಬಗ್ಗೆ ತಿಳಿದು ಕೊಂಡಿದ್ದಳು. ಹಾಗೂ ಯೇಸುವೂ ಒಬ್ಬನೆಂದು ಯೋಚಿಸಿದಳು.

ಆದುದರಿಂದ ಆಕೆ, "ಪ್ರವಾದಿಯೇ, ನಾನು ನಿನಗೊಂದು ಪ್ರಶ್ನೆ ಕೇಳುವೆನು." "ನಮ್ಮ

ಹಿರಿಯರು ಈ ಬೆಟ್ಟದಲ್ಲಿ ದೇವಾರಾಧನೆ ಮಾಡುತ್ತಿದ್ದರು" (ವ. 20ಎ) ಎಂದು ಹೇಳಿದಳು. ಸಮಾರ್ಯರ ಸಹಾಯವನ್ನು ನೆಹೆಮೀಯನು ನಿರಾಕರಿಸಿದ ತರುವಾಯ[13] ಅವರು ಗೆರಿಜಿಮ್ ಬೆಟ್ಟದ ಮೇಲೆ ತಮ್ಮ ಸ್ವಂತ ದೇವಾಲಯ ಕಟ್ಟಿಕೊಂಡರು. ಅವರು ಗೆರಿಜಿಮ್ ಬೆಟ್ಟದ ಬಗ್ಗೆ ಅನೇಕ ಹೇಳಿಕೆಗಳನ್ನು ಹುಡಿಕಿ ಕೊಂಡರು; ಅಬ್ರಹಾಮನು ಇಸಾಕನನ್ನು ಬಲಿಕೊಡಲು ಇಲ್ಲಿಗೆ ಬಂದನು; ಇಲ್ಲಿ ಮೆಲ್ಕಿಚೆದೆಕನು ಅಬ್ರಹಾಮನನ್ನು ಸಂದರ್ಶಿಸಿದನು. ಇಸ್ರಾಯೇಲ್ಯರು ವಾಗ್ದತ್ತ ದೇಶವನ್ನು ಪ್ರವೇಶಿಸಿದಾಗ ಇಲ್ಲಿ ದೇವರಿಗೆ ಪ್ರಥಮ ಯಜ್ಞವೇದಿಯನ್ನು ಕಟ್ಟಿದರು.[14] ಸುಖರಿಗೆ ಸಮೀಪದಲ್ಲಿದ್ದ ಗೆರಿಜಿಮ್ ಬೆಟ್ಟವು ಅವರ ಅತೀ ಪವಿತ್ರವಾದ ಸ್ಥಳವಾಗಿತ್ತು. ಆ ಸ್ತ್ರೀ "ಬೆಟ್ಟದ" ಬಗ್ಗೆ ಹೇಳಿದಾಗ ತನ್ನ ಕೈಯೆತ್ತಿ ತೋರಿಸಿರಬೇಕು. "ಆದರೆ ನೀವು (ಅಂದರೆ ಯೆಹೂದ್ಯರು) ಆರಾಧನೆ ಮಾಡುವ ಸ್ಥಲವು ಯೆರೂಸಲೇಮಿನಲ್ಲಿ ಅದೆ ಅನ್ನುತ್ತೀರಿ" (ವ. 20ಬಿ). ಆಕೆಯ ಅರ್ಥದಲ್ಲಿದ್ದ ಪ್ರಶ್ನೆ, "ಯಾವುದು ಸರಿಯಾದದ್ದು?" ಎಂಬುದು.

ಬೇಗನೇ ಯಾವುದೂ ಸರಿಯಾದದ್ದಾಗಿರುವದಿಲ್ಲ ಎಂದು ಯೇಸು ಉತ್ತರ ಕೊಟ್ಟನು. "ಅಮ್ಮಾ, ನಾನು ಹೇಳುವ ಮಾತನ್ನು ನಂಬು, ಒಂದು ಕಾಲ ಬರುತ್ತದೆ. ಆ ಕಾಲದಲ್ಲಿ ನೀವು ತಂದೆಯನ್ನು ಆರಾಧಿಸ ಬೇಕಾದರೆ ಈ ಬೆಟ್ಟಕ್ಕೂ ಹೋಗುವದಿಲ್ಲ, ಯೆರೂಸಲೇಮಿಗೂ ಹೋಗುವುದಿಲ್ಲ" (ವ. 21). ಬರಲಿಕ್ಕಿದ್ದ ಮೆಸ್ಸೀಯನು ರಾಜ್ಯದಲ್ಲಿ ಪ್ರಾಮುಖ್ಯವಾದದ್ದು ಒಂದು ಸ್ಥಲವಲ್ಲ ಆದರೆ ಒಬ್ಬ ವ್ಯಕ್ತಿಯಾಗಿರುವನು (ಯೆರೂಸಲೇಮು ಆರಾಧನೆಯ ಕೇಂದ್ರವಾಗಿ ಪುನಃ ಸ್ಥಾಪಿಸಲ್ಪಡುವುದು. ಯೇಸುವಿನ ಮಾತುಗಳು ಸತ್ಯದಿಂದ ಯಾವವೂ ದೂರವಿರಲಾರವು ಎಂದು ನಮಗೆ ತಿಳಿಸುವವು ಎಂದು ಪ್ರಿಮಿಲ್ಲೆನ್ನಿಯಾಲಿಸಮ್ ಹೇಳುತ್ತದೆ).

"ಬರಬೇಕಾದ ರಕ್ಷಣೆಯು ಯೆಹೂದ್ಯರೊಳಗಿಂದ ಬರುತ್ತದಷ್ಟೇ. ಆದುದರಿಂದ ನಾವು ಅರಿತಿರುವುದನ್ನೇ ಅರಾಧಿಸುವವರಾಗಿದ್ದೇವೆ; ನೀವು ಅರಿಯದೇ ಇರುವಂಥದ್ದನ್ನು ಆರಾಧಿಸುವವರು" ಎಂದು ಮುಂದರಿದು ಹೇಳಿದನು (ವ. 22). "ರಕ್ಷಣೆಯು ಯೆಹೂದ್ಯರೊಳಗಿಂದ ಬರುವುದು" ಎಂದು ಯೇಸು ಹೇಳಿದನು. ಯಾಕಂದರೆ ಮೆಸ್ಸೀಯನು ಯೆಹೂದಿ ಜನಾಂಗದ ಮೂಲಕ ಬಂದನು. ಮುಂದೆ ಸುವಾರ್ತೆಯ ಮೊದಲಿನ ಪ್ರಸಂಗಿಗಳು, ಪೇತ್ರ ಮತ್ತು ಪೌಲನಂಥವರು ಯೆಹೂದ್ಯರಾಗಿದ್ದರು. ಅನಂತರದ ಪ್ರಥಮ ಕ್ರೈಸ್ತರು ಯೆಹೂದ್ಯರಾಗಿದ್ದರು.

ಯೇಸುವಿಗೆ ಈ ಸ್ತ್ರೀಗಾಗಿ ಪ್ರೀತಿಯೂ ಚಿಂತನೆಯೂ ಇದ್ದರೂ ಆಕೆ ದೈಹಿಕವಾಗಿಯೂ ಬೋಧನೆಯ ವಿಷಯದಲ್ಲಿಯೂ ತಪ್ಪಾಗಿದ್ದಳು ಎಂದು ಹೇಳಲು ಯೇಸು ಹಿಂಜರಿಯಲಿಲ್ಲ. ಯಾರನ್ನಾದರೂ ಸ್ವೀಕರಿಸುವದೆಂದರೆ ಅವನ ಜೀವನದಲ್ಲಿಯ ತಪ್ಪಾದದ್ದನ್ನು ಸ್ವೀಕರಿಸಬೇಕೆಂದು ಇರುವದಿಲ್ಲ. ಒಬ್ಬ ಸ್ನೇಹಿತನು ನೈತಿಕವಾಗಿ ಹಾಗೂ ಇಲ್ಲವೇ ಬೋಧನೆಗೆ ಸಂಬಂಧಿಸಿ ತಪ್ಪಾಗಿರುವಾಗ ಅವನಿಗೆ ಏನನ್ನು ಹೇಳದಿರುವುದು ಅವನನ್ನು ಪ್ರೀತಿಸುವಂಥದ್ದಾಗಿರುವದಿಲ್ಲ; ಅದು ಪ್ರೀತಿಯ ಕೊರತೆ ಯಾಗಿರುತ್ತದೆ.

ಆಮೇಲೆ ಯೇಸು, "ಕಾಲ ಬರುತ್ತದೆ; ಅದು ಈಗಲೇ ಬಂದಿದೆ. (ದೇವರ ರಾಜ್ಯದ ಸ್ಥಾಪನೆ, ಸಭೆಯ ಸ್ಥಾಪನೆ ಕೆಲವು ತಿಂಗಳುಗಳಲ್ಲಿ ಬರಲಿದೆ) ತಂದೆಯು ತನ್ನನ್ನು ಆರಾಧಿಸುವವರು ಇಂಥವರೇ ಆಗಿರಬೇಕೆಂದು ಅಪೇಕ್ಷಿಸುತ್ತಾನಲ್ಲವೇ! ದೇವರು ಆತ್ಮ ಸ್ವರೂಪನು; ಆತನನ್ನು ಆರಾಧಿಸುವವರು ಆತ್ಮಿಯ ರೀತಿಯಲ್ಲಿ ಸತ್ಯಕ್ಕೆ ತಕ್ಕಹಾಗೆ ಆರಾಧಿಸಬೇಕು" (ವ. 24) ಎಂದು ಹೇಳಿದನು. ಆರಾಧನೆಯು "ಎಲ್ಲಿ?" ಎಂಬುದು ಪ್ರಾಮುಖ್ಯವಾಗಿರುವದಿಲ್ಲ. ಯಾರು? ಮತ್ತು ಹೇಗೆ? ಎಂಬುದು ಪ್ರಾಮುಖ್ಯ. ಯಾರು "ತಂದೆ." ಹೇಗೆ? "ಆತ್ಮದಲ್ಲಿ" -ದೇವರು ಅಪೇಕ್ಷಿಸುವಂಥ ಹೃದಯದಿಂದ. "ಸತ್ಯದಲ್ಲಿ"

-ದೇವರ ಆದೇಶನಗಳಂತೆ. ಯೋಹಾನ 17ರಲ್ಲಿಯ ಯೇಸುವಿನ ಮಹಾ ಪ್ರಾರ್ಥನೆಯಲ್ಲಿ "ನಿನ್ನ ವಾಕ್ಯವೇ ಸತ್ಯವು" ಎಂದು ಆತನು ಹೇಳಿದ್ದಾನೆ (ಯೋಹಾನ 17:17).

ನಿಜವಾದ ಆರಾಧನೆಯ ಮಹಾ ಸಾರಾಂಶವು ಹೀಗಿದೆ: "ದೇವರು ಆತ್ಮನಾಗಿದ್ದಾನೆ; ಆತನನ್ನು ಆರಾಧಿಸುವವರು ಆತ್ಮದಿಂದಲೂ ಸತ್ಯದಿಂದಲೂ ಆರಾಧಿಸಬೇಕು" (ವ. 24). ಈ ಪದ್ಯದಿಂದ ಆರಾಧನೆಯ ಬಗ್ಗೆ ನಾವು ಬಹಳವಾದದ್ದನ್ನು ಕಲಿತುಕೊಳ್ಳುತ್ತೇವೆ - ಆದರೆ ಈ ಪ್ರತ್ಯೇಕವಾದ ಪಾಠದಲ್ಲಿ ಯೇಸುವಿನ ಹಾಗೂ ಆತನ ಸುತ್ತಲಿದ್ದವರ ಮಧ್ಯದಲ್ಲಿಯ ಸಂಬಂಧವನ್ನು ಕುರಿತು ಯೋಚಿಸುವವರಾಗಿದ್ದೇವೆ.

"ಆ ಹೆಂಗಸು ಯೇಸುವಿಗೆ - ಮೆಸ್ಸೀಯನು[15] (ಅಂದರೆ ಕ್ರಿಸ್ತನು) ಬರುತ್ತಾನೆಂದು ಬಲ್ಲೆನು; ಆತನು ಬಂದ ಮೇಲೆ ನಮಗೆ ಎಲ್ಲಾ ತಿಳಿಸುವನು ಎಂದಳು" (ವ. 25). ಮೆಸ್ಸೀಯನ ವಿಷಯವನ್ನು ಸಮಾರ್ಯದವರು ಯೆಹೂದ್ಯರಿಂದ ತೆಗೆದುಕೊಂಡ ಇನ್ನೊಂದು ಸತ್ಯವು ಇದಾಗಿತ್ತು. ಸ್ತ್ರೀಯ ನಂಬಿಕೆಯು ಹೇಗೆ ಬೆಳವಣಿಗೆಯಾಗುತ್ತಿತ್ತೆಂಬುದನ್ನು ಗಮನಿಸಿರಿ. ಮೊದಲು ಆಕೆ ಯೇಸುವನ್ನು "ಯೆಹೂದ್ಯನು" ಎಂದು ಹೇಳಿದಳು (ವ. 9). ಆಮೇಲೆ "ಅಯ್ಯಾ" ಎಂದಳು (ವ. 11; ಅಕ್ಷರಶಃವಾಗಿ "ಕರ್ತನು"). ಆಮೇಲೆ ಪ್ರವಾದಿ (ವ. 19) ಎಂದಳು. ಈಗ ಯೇಸು ಮಾತಾಡಿದಂತೆ ಆತನು ಆಕೆಗೆ ತಾನು "ಮೆಸ್ಸೀಯನು" (ವ. 25; ನೋಡಿರಿ ವ. 29) ಎಂದು ಜ್ಞಾಪಕಕ್ಕೆ ತಂದನು.

"ಯೇಸು ಆಕೆಗೆ - ನಿನ್ನ ಸಂಗಡ ಮಾತಾಡುತ್ತಿರುವ ನಾನೇ ಆ ಮೆಸ್ಸೀಯನು ಎಂದು ಹೇಳಿದನು" (ವ. 26).[16] "ನಿನ್ನೊಂದಿಗೆ ಮಾತಾಡುತ್ತಿರುವವನು ನಾನೇ ಆಗಿದ್ದೇನೆ"[17] ಎಂದು ಮೂಲದಲ್ಲಿ ಅಕ್ಷರಶಃವಾಗಿದೆ. "ನೀನು ಮೆಸ್ಸೀಯನಿಗಾಗಿ ನೋಡುತ್ತಿರುವಿಯಲ್ಲವೇ? ನಾನೇ ಆಗಿದ್ದೇನೆ! ನೀನು ಉತ್ತರಗಳಿಗಾಗಿ ನೋಡುತ್ತಿರುವಿಯಲ್ಲವೇ? ನಾನೇ ಆಗಿದ್ದೇನೆ! ನೀನು ನಿರೀಕ್ಷೆಗಾಗಿ, ಸಹಾಯಕ್ಕಾಗಿ, ನಿನ್ನ ಆಂತರ್ಯದ ಬಾಯಾರಿಕೆಯನ್ನು ತೀರಿಸುವದಕ್ಕಾಗ್ಗಿ ಯಾವುದಕ್ಕಾಗಿಯೋ ಹುಡುಕುತ್ತ ನೋಡುತ್ತಿರುವಿಯಲ್ಲವೋ? ನಾನೇ ಆಗಿದ್ದೇನೆ!" ಎಂದು ಯೇಸು ಹೇಳಿದನು.

## ಉತ್ತೇಜನದ ವಿರಾಮ
## (ಯೋಹಾನ 4:27-38)

ಶಿಷ್ಯರು ಆಹಾರದೊಂದಿಗೆ ಹಿಂದಿರುಗಿ ಬಂದರು.[18] "ಅಷ್ಟರೊಳಗೆ ಆತನ ಶಿಷ್ಯರು ಬಂದು ಒಬ್ಬ ಹೆಂಗಸಿನ ಸಂಗಡ ಮಾತಾಡುತ್ತಿರುವದನ್ನು ಕಂಡು ಆಶ್ಚರ್ಯಪಟ್ಟರು. ಆದರೂ - ನಿನಗೆ ಏನು ಬೇಕು? ಆಕೆಯ ಸಂಗಡ ಯಾಕೆ ಮಾತಾಡುತ್ತೀ? ಎಂದು ಒಬ್ಬರೂ ಕೇಳಲಿಲ್ಲ" (ವ. 27).

"ಆಗ ಆ ಹೆಂಗಸು ತನ್ನ ಕೊಡವನ್ನು ಅಲ್ಲೆ ಬಿಟ್ಟಳು" (ವ. 28ಎ). ಕೊಡಬಿಟ್ಟು ಹೋಗುವುದು ಆಕೆಯ ಭಾವೋದ್ವೇಗವನ್ನೂ ಆಕೆ ಹಿಂದಿರುಗಿ ಬರುವ ಯೋಜನೆಯನ್ನೂ ಸೂಚಿಸುತ್ತದೆ.

> ಊರೊಳಕ್ಕೆ ಹೋಗಿ ಜನರಿಗೆ - ಅಲ್ಲಿ ಒಬ್ಬನಿದ್ದಾನೆ, ನಾನು ಇದುವರೆಗೆ ಮಾಡಿದ್ದನ್ನೆಲ್ಲಾ ನನಗೆ ಹೇಳಿದನು; ಬಂದು ಅವನನ್ನು ನೋಡಿರಿ; ಬರತಕ್ಕ ಕ್ರಿಸ್ತನು ಅವನೇ ಏನೋ? ಎಂದು ಹೇಳಲು ಆತನ ಬಳಿಗೆ ಬರುವದಕ್ಕೆ ಊರೊಳಗಿಂದ ಹೊರಟರು (28ಬಿ-30 ವಚನಗಳು).

ಸಮಾರ್ಯದವರು ಬಾವಿಯ ಬಳಿಗೆ ಬರಲಿಕ್ಕಿದ್ದಾಗ, ಯೇಸು ಆ ಸಮಯವನ್ನು ತನ್ನ ಶಿಷ್ಯರಿಗೆ ಬೋಧಿಸಲು ಉಪಯೋಗಿಸಿದನು.

> ಅಷ್ಟರೊಳಗೆ ಶಿಷ್ಯರು, "ಗುರುವೇ ಊಟ ಮಾಡು" ಎಂದು ಆತನನ್ನು ಬೇಡಿಕೊಂಡರು. ಆದರೆ ಆತನು ಅವರಿಗೆ, "ನಿಮಗೆ ತಿಳಿಯದಂಥ ಆಹಾರವು ನನಗುಂಟು" ಎಂದು ಹೇಳಲಿದನು. ಶಿಷ್ಯರು, "ಆತನಿಗೆ ಯಾರಾದರೂ ಊಟಕ್ಕೆ ತಂದು ಕೊಟ್ಟರೋ ಏನೋ?" ಎಂದು ತಮ್ಮ ತಮ್ಮೊಳಗೆ ಮಾತಾಡಿಕೊಂಡರು (31-33 ವಚನಗಳು).

ಆತನು ನಿಕೊದೇಮನಿಗೆ ಬೋಧಿಸಿದಂತೆ ಹಾಗೂ ಸ್ತ್ರೀಗೆ ಬೋಧಿಸಿದಂತೆ ಯೇಸು ಈ ಶಿಷ್ಯರಿಗೆ ಬೋಧಿಸಿದನು. ಆತನು ಮೊದಲು ರಹಸ್ಯ ಹೇಳಿಕೆ ಹೇಳಿದನು: ಅವರು ತಪ್ಪಾಗಿ ತಿಳಿದು ಅಕ್ಷರಶಃವಾಗಿ ತಗೆದು ಕೊಂಡರು. ಅನಂತರ ಆತನು ಅವರನ್ನು ಆತ್ಮಿಕ ತಿಳುವಳಿಕೆಗೆ ನಡಿಸಿದನು. "ಯೇಸು ಅವರಿಗೆ - ನನ್ನನ್ನು ಕಳುಹಿಸಿದಾತನ ಚಿತ್ತದಂತೆ ಮಾಡಿ ಆತನ ಕೆಲಸವನ್ನು ಪೂರೈಸುವುದೇ ನನ್ನ ಆಹಾರ" (ವ. 34). ಯೇಸುವಿನ ಹಿಂಬಾಲಕರಿಗೆ ತಮ್ಮ ಬೋಧಕನನ್ನು ಅರ್ಥ ಮಾಡಿಕೊಳ್ಳಲು ಅದು ಕಠಿಣವಾದ ಸಮಯವಾಗಿತ್ತು. ಹೀಗೆ ಅವರು ಮಂದಬುದ್ಧಿಯುಳ್ಳವರಾಗಿದ್ದರೂ ಅವರ ಬಗ್ಗೆ ಯೇಸುವು ಅಸಕ್ತಿಯುಳ್ಳನಾಗಿದ್ದನು. ಆತನು ವಿವರಿಸುತ್ತಿರುವಂತೆ ತಾಳ್ಮೆಯುಳ್ಳವನಾಗಿದ್ದನು - ಯಾಕಂದರೆ ಪ್ರತಿಯೊಬ್ಬರೂ ವಿಶಿಷ್ಟ ವ್ಯಕ್ತಿಯಾಗಿದ್ದಾರೆ.

ಯೇಸು ಆಮೇಲೆ ರೂಪಕವನ್ನು ಊಟದಿಂದ ಸುಗ್ಗಿಗೆ ಬದಲಾಯಿಸಿದನು. ಸುಗ್ಗಿಗಾಗಿ ಕಾಯುವದನ್ನು ಕುರಿತು ಚಿರಪರಿಚಿತ ಗಾದೆ ಮಾತನ್ನು ಉಲ್ಲೇಖಿಸಿದನು: "ಇನ್ನು ನಾಲ್ಕು ತಿಂಗಳಿಗೆ ಸುಗ್ಗಿ ಬರುವದೆಂದು ನೀವು ಹೇಳುವದುಂಟಷ್ಟೆ. ನಿಮ್ಮ ಕಣ್ಣೆತ್ತಿ ಹೊಲಗಳನ್ನು ನೋಡಿರಿ: ಅವು ಬೆಳ್ಳಗಾಗಿ ಕೊಯ್ಲಿಗೆ ಬಂದವೆಂದು ನಿಮಗೆ ಹೇಳುತ್ತೇನೆ" (ವ. 35). ನೀವು ಬೀಜ ಬಿತ್ತುವಾಗ ಸುಗ್ಗಿಗೆ ಇನ್ನು ನಾಲ್ಕು ತಿಂಗಳು ಇದೆಯೆಂದು ತಿಳಿಯುತ್ತೀರಿ. ಇಲ್ಲಿ ಸಮಾರ್ಯದಲ್ಲಿ ಪರಿಸ್ಥಿತಿಯು ಹಾಗೆ ಇರುವುದೆಂದು ನೀವು ಭಾವಿಸಬಹುದು. ಆದರೆ ಬೀಜವು ಕೆಲವು ಸಮಯದ ಹಿಂದೆ ಬಿತ್ತಲ್ಪಟ್ಟಿದೆ.[19] "ಈಗ ಇದು ಸುಗ್ಗಿಯ ಸಮಯ" ಎಂದು ಬೇರೆ ಮಾತಿನಲ್ಲಿ ಹೇಳಬಹುದು. "ಹೊಲಗಳು ... ಬೆಳ್ಳಗಾಗಿ ಕೊಯ್ಲಿಗೆ ಬಂದಿವೆ" ಎಂದು ಯೇಸು ಹೇಳುತ್ತಿದ್ದಾಗ, ಬಹುಶಃ ಪಟ್ಟಣದೊಳಗಿಂದ ಹೊರಗೆ ಬರುತ್ತಿದ್ದ ಬಿಳಿ ನಿಲುವಂಗಿಧರಿಸಿದ ಸಮಾರ್ಯದವರ ಕಡೆಗೆ ತೋರಿಸಿ ಹೇಳಿರಬೇಕು.[20]

## ತೃಪ್ತಿಗೊಳಿಸುವ ಸುಗ್ಗಿ
## (ಯೋಹಾನ 4:39-42)

ಸುಗ್ಗಿಯ ಬಗ್ಗೆ ಯೇಸು ತನ್ನ ಬೋಧನೆಯನ್ನು ಪೂರ್ತಿಗೊಳಿಸಿದಾಗ[21] ಸಮಾರ್ಯದವರು ಆಗಲೇ ಬಂದರು.

> ನಾನು ಮಾಡಿದ್ದನ್ನೆಲ್ಲಾ ಆತನು ನನಗೆ ಹೇಳಿದನೆಂಬುದಾಗಿ ಸಾಕ್ಷಿಕೊಡುತ್ತಿರುವ ಆ ಹೆಂಗಸಿನ ಮಾತಿನ ಮೇಲೆ ಆ ಊರಿನ ಸಮಾರ್ಯದಲ್ಲಿ ಅನೇಕರು ಆತನನ್ನು ನಂಬುವವರಾದರು. ಆದ್ದರಿಂದ ಆ ಸಮಾರ್ಯರು ಆತನ ಬಳಿಗೆ ಬಂದು - ನೀನು ನಮ್ಮಲ್ಲಿ ಇರಬೇಕೆಂದು ಆತನನ್ನು ಬೇಡಿಕೊಳ್ಳಲು ಆತನು ಎರಡು ದಿವಸ ಅವರಲ್ಲೇ ಇದ್ದನು (39, 40 ವಚನಗಳು).

ಯೇಸುವಿಗೆ ಗಲಿಲಾಯವನ್ನು ತಲುಪಲು ಯಾವುದೇ ಒತ್ತಡದ ಉದ್ದೇಶವಿದ್ದರೂ ಆತನು ಮಿಶ್ರರಕ್ತದ ಈ ಜನರೊಂದಿಗೆ ಎರಡು ದಿನಗಳನ್ನು ಕಳೆದನು. ಯಾಕೆಂದರೆ ಪ್ರತಿಯೊಬ್ಬರೂ ವಿಶೇಷ ವ್ಯಕ್ತಿಗಳಾಗಿದ್ದಾರೆ.

ಅವರು ಯೇಸುವನ್ನು ಸ್ವತಃ ನೋಡಿದಾಗ, ಅವರು ಆತನು ಹೇಳುವದನ್ನು ಕೇಳಿದಾಗ, ಆತನು ವರ್ತಿಸಿದ ರೀತಿಯನ್ನು ನೋಡಿದಾಗ, ಹಾಗೂ ಆತನು ಎಲ್ಲಾ ಜನರನ್ನು ಪ್ರೀತಿಸಿದ್ದನ್ನು ನೋಡಿದಾಗ "ಹೆಚ್ಚು ಜನರು ಆತನ ವಾಕ್ಯವನ್ನು ಕೇಳಿ ನಂಬಿದರು" (ವ. 41).

ಈ ತಿರಸ್ಕರಿಸಲ್ಪಟ್ಟ ಜನರನ್ನು, "ಬೆಳ್ಳಗಾಗಿ ಕೊಯ್ಲಿಗೆ ಬಂದ ಹೊಲ" ಎಂದು ಕರೆದದ್ದರಲ್ಲಿ ಯೇಸು ತಪ್ಪಾದ ಭರವಸೆಯನ್ನು ಇಟ್ಟನೋ? ನಮ್ಮ ಪಠ್ಯದ ಕೊನೆಯ ವಚನವನ್ನು ಗಮನಿಸಿರಿ: "ನಾವು ಆತನನ್ನು ನಂಬಿರುವುದು ಇನ್ನು ನಿನ್ನ ಮಾತಿನ ಮೇಲೆ ಅಲ್ಲ: ನಾವು ಕಿವಿಯಾರೆ ಕೇಳಿ ಈತನು ಲೋಕ ರಕ್ಷಕನೇ ಹೌದೆಂದು ತಿಳಿದು ಕೊಂಡಿದ್ದೇವೆ ಎಂದು ಹೇಳಿದರು" (ವ. 42). ಎಂಥಾ ಆಶ್ಚರ್ಯಕರವಾದ ಹೇಳಿಕೆ: "ಈತನು ಲೋಕ ರಕ್ಷಕನೇ ಹೌದೆಂದು ತಿಳಿದು ಕೊಂಡಿದ್ದೇವೆ." ಯೇಸುವಿನ ನಿಕಟವಾದ ಅನುಯಾಯಿಗಳು, ಅಪೊಸ್ತಲರು ಆತನನ್ನು ಯೆಹೂದ್ಯರ ರಕ್ಷಕನೆಂದು ಯೋಚಿಸಿದರು. ಪೇತ್ರನಿಗೆ ದೇವರು ವಿಶೇಷ ದರ್ಶನ ಕಳುಹಿಸುವವರೆಗೆ ಅವರು ಬೇರೆಯದಾಗಿ ತಿಳಿದು ಕೊಂಡಿರಲಿಲ್ಲ.[22] ಇನ್ನೊಂದು ಕಡೆಯಲ್ಲಿ ಈ ಸಮಾರ್ಯರು ಯೇಸುವನ್ನು ಲೋಕ ರಕ್ಷಕನೆಂದು ನೋಡಿದರು.

## ಮುಕ್ತಾಯ

ನೀವು "ಲೋಕದಲ್ಲಿ" ಇದ್ದರೆ, ನೀವು ಭೂಲೋಕದ ಮೇಲೆ ನಡೆಯುತ್ತಿದ್ದರೆ, ಯೇಸುವು ನಿಮ್ಮ ರಕ್ಷಕನಾಗಿದ್ದಾನೆ. ನೀವು ಆತನಿಗೆ ವಿಶೇಷವಾದವರಾಗಿದ್ದೀರಿ. ಆತನು ನಿಮ್ಮನ್ನು ಪ್ರೀತಿಸುತ್ತಾನೆ. ಆತನು ನಿಮಗಾಗಿ ಚಿಂತಿಸುತ್ತಾನೆ. ಆತನು ನಿಮಗಾಗಿ ಸಮಯ ಕೊಡುತ್ತಾನೆ. ಆತನು ನಿಮಗಾಗಿ ಮರಣ ಹೊಂದಿದನು. ಆತನು ನಿಮ್ಮನ್ನೆಂದು ಮರೆಯುವದಿಲ್ಲ. ಯಾಕೆ? ಯಾಕಂದರೆ ಪ್ರತಿಯೊಬ್ಬರೂ ವಿಶೇಷವಾದವರಾಗಿದ್ದಾರೆ, ನೀನೂ ಸಹ ವಿಶೇಷ ವ್ಯಕ್ತಿಯಾಗಿರುವಿ.

---

ಟಿಪ್ಪಣಿಗಳು

[1]Quoted by James Dobson, *Hide or Seek*, rev. ed. (Old Tappan, N.J.: Fleming H. Revell Co., 1979), 58. [2]ಈ ದೃಷ್ಟಾಂತವು ಇತರ ಕ್ಷೇತ್ರಗಳಿಗಾಗಿ ವ್ಯಕ್ತೀಕರಿಸಲ್ಪಡಬಹುದು. ಅತಿಯಾಗಿ ಸುತ್ತು ಮಾರ್ಗದಿಂದ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ಹೋಗುವುದು. [3]ಮತ್ತಾಯ 4:12. [4]ಇಲ್ಲಿ ಯೋಹಾನನು ಸಮಯದ ಬಗ್ಗೆ ರೋಮನ್ ಎಣಿಕೆಯನ್ನು ಉಪಯೋಗಿಸಿರುವನೆಂದು ಅನೇಕರು ಹೇಳುತ್ತಾರೆ. [5]ಕ್ಷೇತ್ರದಲ್ಲಿಯ ಪ್ರಸಿದ್ಧ ಕಿರಾಣಿ ಅಂಗಡಿಗಳ ಇಲ್ಲವೇ ತ್ವರಿತ ಆಹಾರ ಮಾರಾಟಗಾರರ ಹೆಸರುಗಳನ್ನು ಉಪಯೋಗಿಸಬಹುದು. [6]ಈ ರೀತಿಯ ಆಳವಾಗಿ ದ್ವೇಷಿಸುವ ರೀತಿಯನ್ನು ಅನೇಕರು ಕಂಡಿದ್ದಾರೆ. ಆಲಿಸುವವರು ತಾವು ಅನುಭವಿಸಿದ ದ್ವೇಷದ ಹಾಗೂ ಯೆಹೂದ್ಯರಿಗೂ ಸಮಾರ್ಯದವರಿಗೂ ಇದ್ದ ದ್ವೇಷದ ಹೋಲಿಕೆಯನ್ನು ಅರ್ಥ ಮಾಡಿಕೊಳ್ಳುವರು. [7]2 ಅರಸು 17:6. [8]2 ಅರಸು 17:24. [9]ಕೀರ್ತನೆ 36:9; ಯೆಶಾಯ 35:7; ಯೆರೆ ಮೀಯ 17:13; ಹಾಗೂ ಅಂಥ ವಚನಗಳನ್ನು ಗಮನಿಸಿರಿ. [10]ಆ ಸಮಯದಲ್ಲಿ ಜನರು ಅದರಲ್ಲಿ ಕಲ್ಲನ್ನು ಎಸೆದಿರುವರು. ಇಂದು ಅದು ಸುಮಾರು ಐವತ್ತರಿಂದ

ಅರವತ್ತು ಅಡಿಗಳವರೆಗೆ ಆಳವಾಗಿರುವುದು. ಈಗ ಅದರ ಮೇಲೆ ಒಂದು ಮುಚ್ಚಳವಿರುವುದು.

[11]ಹೋಲಿಸು. ಲೂಕ 7:39. [12]ಆಕೆ ವಿಷಯ ಬದಲಿಸದೇ ಇದ್ದ ಸಾಧ್ಯತೆಯಿದೆ. ಬಹುಶಃ ಆಕೆ ತನ್ನ ಪಾಪಗಳಿಗಾಗಿ ತಾನು ಎಲ್ಲಿ ಯಜ್ಞವನ್ನು ಅರ್ಪಿಸಬೇಕೆಂದು ಕೇಳುತ್ತಿರಬಹುದು (ವ. 20). [13]ಹೋಲಿಸು. ನೆಹಮೀಯ 4:1-3; 6:1-4. [14]ಗೆರಿಜಿಮ್ ಬೆಟ್ಟವನ್ನು ಮಹಿಮೆಪಡಿಸಲು ಅವರು ಪರಿಶುದ್ಧ ಬರಹವನ್ನು ಚರಿತ್ರೆಯನ್ನು ದುರುಪಯೋಗ ಪಡಿಸಿಕೊಂಡರು. [15]"ಮೆಸ್ಸೀಯ" ಎಂಬುದು ಹಿಬ್ರೂ ಪದ. "ಅಭಿಷಿಕ್ತನು" ಎಂದು ಅದರ ಅರ್ಥ. "ಕ್ರಿಸ್ತ" ಎಂಬ ಪದ ಗ್ರೀಕರೂಪವು, ಇದು ಸಹ "ಅಭಿಷಿಕ್ತನು" ಎಂದರ್ಥ ಕೊಡುತ್ತದೆ. [16]ಯೇಸುವಿನ ವೈರಿಗಳು ಸಮೀಪದಲ್ಲಿ ಸುತ್ತುವರಿಯದೇ ಇರುವದಿಂದ (ಸಾಮಾನ್ಯವಾಗಿ ಅವರು ಮಾಡುತ್ತಿದ್ದಂತೆ) ತನ್ನ ಬಗೆಗಿದ್ದ ಆತನ ಹೇಳಿಕೆಯು ಸಾಮಾನ್ಯವಾದದ್ದಕ್ಕಿಂತ ಹೆಚ್ಚು ಧೈರ್ಯದಿಂದ ಕೂಡಿತ್ತು. [17]"I am" ಎಂಬುದು ದೈವೀಯ ಪ್ರಕಟಣೆಯಾಗಿದೆ (ಹೋಲಿಸು ವಿ.ಕಾಂ. 3:14). ಯೋಹಾನನ ಸುವಾರ್ತೆಯು ಯೇಸು ದೇವರ ಕುಮಾರನು ಎಂಬುದನ್ನು ಒತ್ತಿ ಹೇಳಲು ಬಹಳ ಸಲ ಉಪಯೋಗಿಸಿದೆ. [18] "ಅವರು ಬರ್ಗರ್ಸ ಹಾಗೂ ಫ್ರೈಜದೊಂದಿಗೆ ಹಿಂದಿರುಗಿದರು" ಎಂದು ಯು. ಎಸ್. ದಲ್ಲಿ ಹೇಳಬಹುದು. "ಫಿಶ್ ಹಾಗೂ ಚಿಫ್ಸ್‌ದೊಂದಿಗೆ ..." ಎಂದು ಆಸ್ಟ್ರೇಲಿಯಾದಲ್ಲಿ ಹೇಳಬಹುದು. [19]ವ. 38 ಗಮನಿಸಿರಿ. "ಇತರರು ಕೆಲಸ ಮಾಡಿದ್ದಾರೆ" ಇದರ ವಿವರಣೆ ನಮಗಿರುವದಿಲ್ಲ. ಸಮಾರ್ಯದವರು ಕಲಿತುಕೊಂಡ ಮೆಸ್ಸೀಯನನ್ನು ಕುರಿತಾದ ಬೋಧನೆಯನ್ನು ಯೇಸು ಹಳೆ ಒಡಂಬಡಿಕೆಗೆ ಸಂಬಂಧಿಸಿ ಹೇಳುತ್ತಿರಬಹುದು. ಸ್ನಾನಿಕನಾದ ಯೋಹಾನನ ಕೆಲಸದ ಭಾಗವು ಸಮಾರ್ಯರೊಂದಿಗೆ ಇತ್ತೆಂದು ಕೆಲವರು ನಂಬುತ್ತಾರೆ. [20]ಸಮಾರ್ಯದವರ "ಕೊಯ್ಲಿಗೆ ಬಂದದ್ದು" ಈ ಸಮಯದಲ್ಲಿ ಅವರು ಸ್ವೀಕರಿಸಿದ್ದರಿಂದ ಅಷ್ಟೇ ಅಲ್ಲ, ಅ. ಕೃ. 8ರಲ್ಲಿ ಫಿಲಿಪ್ಪನಿಂದ ಆದ ಸುಗ್ಗಿಯಿಂದಲೂ ಸಿದ್ಧಪಡಿಸಲ್ಪಟ್ಟಿತು.

[21]ಯೋಹಾನ 4:36-38. [22]ಅ. ಕೃ. 10:9-16, 34, 35.

---

## ಪ್ರಸಂಗಿಗಳಿಗೂ ಬೋಧಕರಿಗೂ ಒಂದು ಸಲಹೆ

ಇದು ಒಂದು ಅಂಶದ ಪ್ರಸಂಗ: "ಪ್ರತಿಯೊಬ್ಬರೂ ವಿಶಿಷ್ಟವಾದ ವ್ಯಕ್ತಿಯಾಗಿದ್ದಾರೆ." ಪೀಠಿಕೆಯಲ್ಲಿ ನೀವು ಈ ಪದಗಳಿಗೆ ಬರುವಾಗ, ನೀವು ತಡೆದು ನಿಮ್ಮ ಶ್ರೋತೃಗಳು ಅವುಗಳನ್ನು ನೀವು ಹೇಳಿದಂತೆ ಹೇಳಲು ತಿಳಿಸಿರಿ. ಕೆಲವು ಸಲ ಎಲ್ಲರೂ ಒಟ್ಟಾಗಿ ಹೀಗೆಂದು ಹೇಳಲಿ. ನೀವು ಬಯಸಿದರೆ ಈ ಮಾತುಗಳನ್ನು ಒಂದು ಪೇಪರಿನ ಮೇಲೆ ಬರೆದು ಯೋಗ್ಯ ಸಮಯಗಳಲ್ಲಿ ಅವರಿಗೆ ಎತ್ತಿ ಹಿಡಿದು ತೋರಿಸಿರಿ: ಶ್ರೋತೃಗಳು ಭಾಗವಹಿಸುವುದು ಕೆಲವು ಸಲ ಹೆಚ್ಚು ಪ್ರಯೋಜನವಾಗುತ್ತದೆ.

© 2009 Truth for Today